ನಾಮಾವಳಿಯಂತೆ, ನವನವೋನ್ಮೇಶನಶಾಲಿಯಾಗಿ ಅದು ಹೊಳೆಯುತ್ತಲೇ ಇರುತ್ತದೆ. ವೈವಿಧ್ಯಮಯವಾಗಿ ಬೆಳೆಯುತ್ತಲೇ ಇರುತ್ತದೆ. 'ಚಕ್ರ ಬಡ್ಡಿ' ಅಂದರೆ ಚಕ್ರದಂತೆ ಒಂದೇ ಸಮನೆ ಹಣವನ್ನು ಸುತ್ತುತ್ತಲೇ ಹೋಗುವ ಬಡ್ಡಿ. 'ಸಾಲು ಬಡ್ಡಿ' ಅಂದರೆ ಎಂದೆಂದೂ ಕೊನೆಯಾಗದ ಪಡಿತರ ಚೀಟಿಯನ್ನು ಪಡೆಯಲು ನಿಂತ ನಿರಂತರವಾಗಿ ಬೆಳೆಯುವ ಬಡ್ಡಿ. 'ಸುಸ್ತಿ ಬಡ್ಡಿ' ಅಂದರೆ ಸಾಲದ ಹೆಚ್ಚುವರಿ ಹಣವನ್ನು ಕೊಟ್ಟೂ ಕೊಟ್ಟು ಸುಸ್ತಾಗುವ ಬಡ್ಡಿ. 'ಮೇಲು ಬಡ್ಡಿ' ಅಂದರೆ ಮೇಲಿಂದ ಮೇಲೆ ಹಣವನ್ನು ಸೆಳೆಯುತ್ತಲೇ ಹೋಗುವ ಬಡ್ಡಿ. 'ಮುಂಗಡ ಬಡ್ಡಿ' ಅಂದರೆ ಸಾಲ ಕೊಡುವುದಕ್ಕಿಂತ ಮುಂಚೆಯೇ ಬಡ್ಡಿ ವಸೂಲು ಮಾಡುವುದು, ಆಮೇಲೆ ಹಿಂಗಡವಾಗಿ ಎರಡನೆಯ ಬಾರಿ ವಸೂಲು ಮಾಡುವುದು ಇತ್ಯಾದಿ. ಈ ಬಡ್ಡಿ ದರಗಳನ್ನು ಕಾಲದಿಂದ ಕಾಲಕ್ಕೆ ನಿಗದಿ ಪಡಿಸುವುದರಿಂದ ಇದಕ್ಕೆ ಕಾಲಬಡ್ಡಿ ಎಂಬ ಹೆಸರೂ ಸಲ್ಲುತ್ತದೆ ಅನ್ನಿ. ಇವೆಲ್ಲ ಅಲ್ಲದೆ ಗಂಟೆ ಬಡ್ಡಿ, ದಿನ ಬಡ್ಡಿ, ವಾರ ಬಡ್ಡಿ, ತಿಂಗಳು ಬಡ್ಡಿ, ಆರು ತಿಂಗಳು ಬಡ್ಡಿ, ವರ್ಷ ಬಡ್ಡಿ ಇತ್ಯಾದಿ ಕಾಲ ಮಿತಿಗಳಲ್ಲಿ ಸಾಲಗಾರನು ಬಡ್ಡಿಯನ್ನು ಜಮಾ ಮಾಡುತ್ತಲೇ ಹೋಗಬೇಕು. ಇಲ್ಲದಿದ್ದರೆ ಅವನ ಕಾಲಿಗೂ ಅಪಾಯ ತಪ್ಪಿದ್ದಲ್ಲ. ಈ ಬಡ್ಡಿ ಬಗೆಗಳನ್ನು ನೋಡಿದರೆ ಅದೊಂದು ರೀತಿಯಲ್ಲಿ ರಕ್ತಬೀಜಾಸುರನ ಸಂತತಿಯೇ ಹೌದೆನ್ನಿಸುವುದಲ್ಲವೆ? ಆದರೆ, ಬಡ್ಡಿ ಆಸೆಗೆ ಬಿದ್ದು ಬಡಬಡಿಸುವ ಸಾಲಿಗರೂ ಇಲ್ಲದಿಲ್ಲ. ಈ ಬಹುರೂಪಿಯಾದ ಬಡ್ಡಿ ಬಯಸಿ ಊರಲ್ಲೊಬ್ಬಳು, 'ಬಡ್ಡಿ ಆಸೆಗೆ ಬಿದ್ದು ಗಂಟು ಕಳಕೊಂಡ್ಳು, ಗೆಣೆಯನ (ಮಿಂಡನ) ಗಂಡನ್ನ ಕಳಕೊಡ್ಳು'. ಕ್ಷಣಿಕವಾದ ಮೋಜಿನ ಆಸೆಗೆ ಬಿದ್ದು ಹೆಣ್ಣೊಬ್ಬಳು ಶಾಶ್ವತವಾದ ಗಂಡನನ್ನು ಕಳೆದುಕೊಂಡಂತೆ, ಇನ್ನೊಬ್ಬಳು ಹೆಚ್ಚುವರಿಯಾಗಿ ಮಿರುಗುವ ಬಡ್ಡಿ ಆಸೆಗಾಗಿ ಮೂಲ ಬಂಡವಾಳವನ್ನೇ ಕಳೆದುಕೊಂಡದ್ದನ್ನು ಈ ಗಾದೆ ದಾಖಲಿಸುತ್ತದೆ. ಬಹುಶಃ ಅವಳ ಬಳಿ ಸಾಲ ವಸೂಲು ಮಾಡಲು ನಕ್ಷತ್ರಿಕನೊಬ್ಬ ಇರಲಿಲ್ಲವೇನೊ? ಇನ್ನೊಂದು ಸ್ವಾರಸ್ಯಕರವಾದ ಗಾದೆಯನ್ನು ಇಲ್ಲೇ ಹೇಳಿಬಿಡಬೇಕು; 'ಸಾಲದವನ ಮನೆಗೆ ಸೌದೆ ಹೊತ್ತರೆ ಮೇಗಳ ಬಡ್ಡಿಗೆ ಉತಾರು' ಎಂಬುದು.

ಈ ಬಡ್ಡಿಯ ಹೊಡೆತ ಬರೀ ಮನುಷ್ಯ ಮಾತ್ರದವರಿಗೇ ಸೀಮಿತವಾದುದಲ್ಲ. ಅದು ದೇವಾನುದೇವತೆಗಳನ್ನೇ ಚಿಂತೆಗೀಡು ಮಾಡಿಬಿಟ್ಟಿರುವುದನ್ನು ನಾವು ಪುರಾಣ, ಸ್ಥಳ ಪುರಾಣಗಳಿಂದ ತಿಳಿಯಬಹುದು, ಸ್ವಾಮಿ. ಉದಾಹರಣೆಗೆ ನೋಡಿ, ಈ ಭೂಮಿಯ ಮೇಲಿನ ಅತಿ ಐಶ್ವರ್ಯದ ಕ್ಷೇತ್ರವೆಂದೂ, ಭೂಲೋಕದ ವೈಕುಂಠವೆಂದೂ ಹೆಸರಾಗಿರುವ ಸುಪ್ರಸಿದ್ಧವಾದ ತಿರುಪತಿಯ ತಿಮ್ಮಪ್ಪನನ್ನೂ ಈ ಸಾಲ ಮತ್ತು ಬಡ್ಡಿ ಬಿಟ್ಟಿಲ್ಲ. ತಿರುಪತಿಯ ತಿಮ್ಮಪ್ಪ ಅರ್ಥಾತ್ ಶ್ರೀನಿವಾಸನು ಪದ್ಮಾವತಿಯೊಂದಿಗೆ ಕಲ್ಯಾಣವಾಗುವ ಸಂದರ್ಭದಲ್ಲಿ, ಮದುವೆ ಖರ್ಚಿಗೆಂದು ದೇವತೆಗಳ ಬ್ಯಾಂಕರ್ ಆದ ಕುಬೇರನಿಂದ ಅಪಾರ ಹಣವನ್ನು ಸಾಲವಾಗಿ ಪಡೆದ. ಅನಂತರ, ಪಡೆದ ಸಾಲವನ್ನು ಬಡ್ಡಿ ಸಮೇತ ಹಿಂತಿರುಗಿಸಬೇಕಾಗಿ ಬಂತು. ಅವನು ಎಷ್ಟು ನೀಡಿದರೂ ಅದು ಬಡ್ಡಿಗೇ ಎಟುಕಲಿಲ್ಲವಂತೆ. ಹೀಗಾಗಿ, ಶ್ರೀನಿವಾಸನು ತನ್ನ ಭಕ್ತರಿಂದ ಬರುವ ಕಾಣಿಕೆ ಹಣದಿಂದ ಸಾಲವನ್ನು ಇನ್ನೂ ತೀರಿಸುತ್ತಿದ್ದಾನೆ ಎಂಬುದು ಒಂದು ನಂಬಿಕೆ. ಕುತೂಹಲದ ಸಂಗತಿಯೆಂದರೆ, ಈ ಕುಬೇರನು ಇನ್ನಾವ ಬಗೆಯ ಬಡ್ಡಿ ಹಾಕಿದ್ದನೊ? ಕುಬೇರನ ಈ ಗುಟ್ಟು ನಮ್ಮ ಗಿರವಿ ಅಂಗಡಿ ಮಾಲೀಕರಿಗೆ ಇನ್ನೂ ತಿಳಿದುಬಂದಿಲ್ಲ ಎಂಬುದು ಸಂತೋಷದ ಸಂಗತಿ. ಅದೇ ರೀತಿ, ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿಯು ತನ್ನ ಮದುವೆ ಸಮಯದಲ್ಲಿ ಮಾಡಿದ ಸಾಲ ತೀರಿಸಲು ಬಳ್ಳದಲ್ಲಿ ಅಳೆದೂ ಅಳೆದೂ ಸಾಕಾಗಿ ಅದನ್ನೇ ತಲೆದಿಂಬನ್ನಾಗಿ ಮಾಡಿಕೊಂಡು ಕಾವೇರಿ ನದಿ ದಂಡೆಯಲ್ಲಿ ಮಲಗಿದ್ದಾನೆಂದೂ ಒಂದು ಐತಿಹ್ಯವಿದೆ. ಈ ಎರಡೂ ಐತಿಹ್ಯಗಳ ತಾತ್ಪರ್ಯವೆಂದರೆ, ಸಾಲದ ಹೊಡೆತದ ಪರಿಣಾಮ ಎಷ್ಟೊಂದು ದೀರ್ಘವಾಗಿರುತ್ತದೆ ಮತ್ತು ಮನುಷ್ಯರನ್ನು ಎಷ್ಟೊಂದು